॥ ಶ್ರೀಗುರುರಾಟ್ ಪ್ರಸೀದತು ॥

# ಮುನ್ನುಡಿ

ಶ್ರೀಶ್ರೀಗುರುಸಾರ್ವಭೌಮರು ತಾವೇ ಶ್ರೀವೃಂದಾವನದಲ್ಲಿ ೧೫೯೩ರಲ್ಲಿ ಕೂತಾಗಿನಿಂದಲೂ ಇದುವರೆಗೂ ಕಲ್ಪವೃಕ್ಷದಂತೆ ಸದ್ಭಕ್ತರ ಅಭೀಷ್ಟವನ್ನು ಪೂರೈಸುತ್ತ ಸಕಲ ಜಗದ್ವಂದ್ಯರಾಗಿರುವುದು ಸುವಿದಿತ ವಿಷಯವೇ ಸರಿ. ಅಂತಹ ಗುರುವರ್ಯರನ್ನು ಒಲಿಸುವುದಕ್ಕೆ ಶ್ರೀಮದಪ್ಪಣಾಚಾರ್ಯರು ಅಂದಿನ ದಿನವೇ (ವೃಂದಾವನಪ್ರವೇಶಮಾಡಿದ ದಿನವೇ) ಶ್ರೀಗುರುಸ್ತೋತ್ರವನ್ನು, ಆಮೇಲೆ ಸ್ವಲ್ಪ ದಿನಗಳಲ್ಲಿ ಈ ಕವಚ ಮತ್ತು ಮಂತ್ರವನ್ನು ರಚಿಸಿ ಸುಲಭೋಪಾಯವನ್ನು ಮಾಡಿಕೊಟ್ಟರು. ಐದಾರು ವರ್ಷಗಳಿಂದ ಈ ಕವಚ ಪುಸ್ತಕವು ದುರ್ಲಭವಾಯಿತು. ಇಲ್ಲಿಗೆ ಬಂದಿರತಕ್ಕ ಪ್ರಾಚೀನ ಭಕ್ತರು ನಮಗೆ ಸೂಚಿಸಿದ್ದಕ್ಕಾಗಿ ಕವಚವನ್ನು ಮತ್ತು ಅದರ ಅರ್ಥವನ್ನು ಬರೆಯುವುದಲ್ಲದೆ ಅಜ್ಞಾನದಿಂದ ಹೇಳತಕ್ಕ ಶ್ರೀಗುರುಗಳ ಮಹಿಮೆಗಳಲ್ಲಿ ಬರತಕ್ಕ ಕೆಲವು ಸಂಶಯಗಳನ್ನು ಸಹ ಪರಿಹರಿಸಿರುತ್ತೇವೆ. ಇದನ್ನು ಪಠನಮಾಡಿ ಶ್ರೀಶ್ರೀಗುರುರಾಜರ ಅನುಗ್ರಹಕ್ಕೆ ಪಾತ್ರರಾಗಬೇಕು.

ಸಜ್ಜನ ವಿಧೇಯ,

**†ಅರ್ಚಕ ರಾಘವೇಂದ್ರಾಚಾರ್ಯ**

ಮಂತ್ರಾಲಯ

---

†ವೇದಾಂತವಿದ್ವಾನ್, ಶಿರೋಮಣಿ, ವಿದ್ಯಾಭೂಷಣಂ, ದ್ವೈತಭೂಷಣಂ **ಅರ್ಚಕ ಶ್ರೀರಾಘವೇಂದ್ರಾಚಾರ್ಯರು** ಸಾಹಿತ್ಯರತ್ನಂ ಶ್ರೀವೇದವ್ಯಾಸಾಚಾರ್ಯರ ಮಕ್ಕಳು. ಶ್ರೀಶ್ರೀರಾಘವೇಂದ್ರಸ್ವಾಮಿಗಳವರ ಮೂಲವೃಂದಾವನದ ವಂಶಪರಂಪರಾ ಅರ್ಚಕರು. ಶ್ರೀಗುರುಸಾರ್ವಭೌಮಸಂಸ್ಕೃತಮಹಾಪಾಠಶಾಲೆಯ ವಿಶ್ರಾಂತ ಅಧ್ಯಕ್ಷರು, ಮಂತ್ರಾಲಯ.

॥ ಶ್ರೀಃ ॥

॥ ಶ್ರೀಗುರುಭ್ಯೋ ನಮಃ ॥

ಕವಚಂ ರಾಘವೇಂದ್ರಸ್ಯ ಯತೀಂದ್ರಸ್ಯ ಮಹಾತ್ಮನಃ ।
ವಕ್ಷ್ಯಾಮಿ ಗುರುವರ್ಯಸ್ಯ ವಾಂಛಿತಾರ್ಥಪ್ರದಾಯಕಮ್ ॥೧॥

೧. ಯತಿಶ್ರೇಷ್ಠರಾದ ಮಹಾತ್ಮರಾದ ಗುರುಗಳಲ್ಲಿ ಶ್ರೇಷ್ಠರಾದ ಶ್ರೀರಾಘವೇಂದ್ರಗುರುಗಳ ಅಪೇಕ್ಷಿತಾರ್ಥವನ್ನು ಕೊಡತಕ್ಕ ಕವಚವನ್ನು ಹೇಳುವೆನು.

ಋಷಿರಸ್ಯಾಪ್ಪಣಾಚಾರ್ಯಃ ಛಂದೋಽನುಷ್ಟುಪ್ ಪ್ರಕೀರ್ತಿತಮ್ ।
ದೇವತಾ ಶ್ರೀರಾಘವೇಂದ್ರಗುರುರಿಷ್ಟಾರ್ಥಸಿದ್ಧಯೇ ।
ಅಷ್ಟೋತ್ತರಶತಂ ಜಾಪ್ಯಂ ಭಕ್ತಿಯುಕ್ತೇನ ಚೇತಸಾ ॥೨॥

೨. ಈ ಕವಚಕ್ಕೆ ಅಪ್ಪಣಾಚಾರ್ಯರು ಋಷಿಗಳು. ಅನುಷ್ಟುಪ್ ಛಂದಸ್ಸು. ಶ್ರೀರಾಘವೇಂದ್ರಗುರುಗಳೇ ದೇವತೆ. ಇಷ್ಟಾರ್ಥಸಿದ್ಧಿಯಾಗ ಬೇಕಾದರೆ ಭಕ್ತಿಯುತವಾದ ಮನಸ್ಸಿನಿಂದ ನೂರಾಎಂಟು ಸಲ ಜಪಿಸಬೇಕು.

ಉದ್ಯತ್ ಪ್ರದ್ಯೋತನದ್ಯೋತಧರ್ಮಕೂರ್ಮಾಸನಸ್ಥಿತಂ ।
ಖದ್ಯಖದ್ಯೋತನದ್ಯೋತಪ್ರತಾಪಂ ರಾಮಮಾನಸಮ್ ॥೩॥

ಧೃತಕಾಷಾಯವಸನಂ ತುಲಸೀಹಾರವಕ್ಷಸಂ ।
ದೋರ್ದಂಡವಿಲಸದ್ದಂಡಕಮಂಡಲುವಿರಾಜಿತಂ ॥೪॥

ಅಭಯಜ್ಞಾನಮುದ್ರಾಕ್ಷಮಾಲಾಶೀಲ ಕರಾಂಬುಜಂ ।
ಯೋಗೀಂದ್ರವಂದ್ಯಪಾದಾಬ್ಜಂ ರಾಘವೇಂದ್ರಗುರುಂ ಭಜೇ ॥೫॥

೩-೪-೫. ಉದಯವನ್ನು ಹೊಂದಿದ ಸೂರ್ಯನಂತೆ ಪ್ರಕಾಶಮಾನವಾದ ಭಂಗಾರದ ಕೂರ್ಮಾಸನದಲ್ಲಿ ಕೂತಿರತಕ್ಕ, ಇಂದ್ರಿಯವಿಷಯಗಳನ್ನು (ದುರ್ವಿಷಯಗಳನ್ನು) ಗೆದ್ದ, ಸೂರ್ಯನಂತೆ ಪ್ರಕಾಶಮಾನವಾದ ಪ್ರತಾಪವುಳ್ಳ, ಶ್ರೀರಾಮದೇವರಲ್ಲಿಯೇ ಮನಸ್ಸುವುಳ್ಳ, ಶಾಟಿಯನ್ನುಟ್ಟುಕೊಂಡ, ತುಳಸೀ ಹಾರವನ್ನು ಧರಿಸಿದ, ಎರಡು ಕೈಗಳಲ್ಲಿ ಪ್ರಕಾಶಮಾನಗಳಾದ ಧಂಡ ಕಮಂಡಲುಗಳಿಂದ ಪ್ರಕಾಶಮಾನರಾದ, ಅಭಯಮುದ್ರಾ, ಜ್ಞಾನಮುದ್ರಾ, ಅಕ್ಷಮಾಲಾಗಳಿಂದ ಯುಕ್ತಗಳಾದ ಕಮಲಗಳಂತೆ ಇರತಕ್ಕ ಕೈಗಳುಳ್ಳ, ಯೋಗೀಂದ್ರ ಋಷಿಗಳಿಂದ ವಂದ್ಯಗಳಾದ ಪಾದಕಮಲಗಳುಳ್ಳ, ಶ್ರೀರಾಘವೇಂದ್ರ ಗುರುಗಳನ್ನು ಸೇವಿಸುತ್ತೇನೆ.

**ಶಿರೋ ರಕ್ಷತು ಮೇ ನಿತ್ಯಂ ರಾಘವೇಂದ್ರೋಽಖಿಲೇಷ್ಟದಃ ।**
**ಪಾಪಾದ್ರಿಪಾಟನೇ ವಜ್ರಃ ಕೇಶಾನ್ ರಕ್ಷತು ಮೇ ಸದಾ ॥೬॥**

೬. ಸಮಸ್ತ ಅಭೀಷ್ಟಗಳನ್ನು ಕೊಡತಕ್ಕ ಶ್ರೀರಾಘವೇಂದ್ರರು ನನ್ನ ತಲೆಯನ್ನು ದಿನಾಲೂ ರಕ್ಷಿಸಲಿ. ಪಾಪಗಳೆಂಬ ಪರ್ವತಗಳನ್ನು ನಾಶಮಾಡುವ ವಿಷಯದಲ್ಲಿ ವಜ್ರದಂತೆ ಇರತಕ್ಕ ಶ್ರೀಗುರುಗಳು ನನ್ನ ಕೂದಲುಗಳನ್ನು ಯಾವಾಗಲೂ ರಕ್ಷಿಸಲಿ.

**ಕ್ಷಮಾಸುರಗಣಾಧೀಶೋ ಮುಖಂ ರಕ್ಷತು ಮೇ ಗುರುಃ ।**
**ಹರಿಸೇವಾಲಬ್ಧಸರ್ವಸಂಪತ್ ಫಾಲಂ ಮಮಾವತು ॥೭॥**

೭. ಬ್ರಾಹ್ಮಣರ ಸಮೂಹಕ್ಕೆ ಶ್ರೇಷ್ಠರಾದ ಶ್ರೀಗುರುಗಳು ನನ್ನ ಮುಖವನ್ನು ರಕ್ಷಿಸಲಿ. ಶ್ರೀನರಹರಿಯ ಸೇವೆಯಿಂದ ಹೊಂದಲ್ಪಟ್ಟ ಎಲ್ಲಾ ಸಂಪತ್ತು (ಭಕ್ತಾಭೀಷ್ಟಪ್ರದತ್ವಾದಿ) ವುಳ್ಳ ಗುರುಗಳು ನನ್ನ ಹಣೆಯನ್ನು ಕಾಪಾಡಲಿ.

**ದೇವಸ್ವಭಾವೋಽವತು ಮೇ ದೃಶೌ ತತ್ವಪ್ರದರ್ಶಕಃ ।**
**ಇಷ್ಟಪ್ರದಾನೇ ಕಲ್ಪದ್ರುಃ ಶ್ರೋತ್ರೇ ಶ್ರುತ್ಯರ್ಥಬೋಧಕಃ ॥೮॥**

೮. ದೇವತಾಸ್ವರೂಪರಾದ ತತ್ವವನ್ನು ತಿಳಿಸತಕ್ಕ ಗುರುಗಳು ನನ್ನ ಕಣ್ಣುಗಳನ್ನು, ಅಭೀಷ್ಟವನ್ನು ವಿಶೇಷವಾಗಿ ಕೊಡುವುದರಲ್ಲಿ ಕಲ್ಪವೃಕ್ಷದಂತೆ ಇರತಕ್ಕ, ವೇದಾರ್ಥವನ್ನು ಬೋಧಿಸತಕ್ಕ ಗುರುಗಳು ನನ್ನ ಕಿವಿಗಳನ್ನು ರಕ್ಷಿಸಲಿ.

**ಭವ್ಯಸ್ವರೂಪೋ ಮೇ ನಾಸಾಂ ಜಿಹ್ವಾಂ ಮೇಽವತುಭವ್ಯಕೃತ್ ॥೯॥**

೯. ಮಂಗಳಕರವಾದ ಸ್ವರೂಪವುಳ್ಳ ಗುರುಗಳು ನನ್ನ ಮೂಗನ್ನು, ಮಂಗಳವನ್ನು ಮಾಡತಕ್ಕವರು ನನ್ನ ನಾಲಿಗೆಯನ್ನು ಕಾಪಾಡಲಿ.

**ಆಸ್ಯಂ ರಕ್ಷತು ಮೇ ದುಃಖತೂಲಸಂಘಾಗ್ನಿಚರ್ಯಕಃ ।**
**ಸುಖಧೈರ್ಯಾದಿಸುಗುಣೋ ಭ್ರುವೌ ಮಮ ಸದಾವತು ॥೧೦॥**

೧೦. ದುಃಖವೆಂಬ ಅರಳಿಯ ಸಮೂಹಕ್ಕೆ ಅಗ್ನಿಯಂತೆ ಇರತಕ್ಕ ಗುರುಗಳು ನನ್ನ ಮುಖವನ್ನು ರಕ್ಷಿಸಲಿ. ಸುಖ, ಧೈರ್ಯ ಮುಂತಾದ ಸುಗುಣಗಳುಳ್ಳ ಗುರುಗಳು ನನ್ನ ಹುಬ್ಬುಗಳನ್ನು ಯಾವಾಗಲೂ ಕಾಪಾಡಲಿ.

**ಓಷ್ಠೌ ರಕ್ಷತು ಮೇ ಸರ್ವಗ್ರಹನಿಗ್ರಹಶಕ್ತಿಮಾನ್ ।**
**ಉಪಪ್ಲವೋದಧಿಸೇತುರ್ದಂತಾನ್ ರಕ್ಷತು ಮೇ ಸದಾ ॥೧೧॥**

೧೧. ಎಲ್ಲಾ ಗ್ರಹಗಳನ್ನು ನಿಗ್ರಹಮಾಡುವ ಶಕ್ತಿವುಳ್ಳವರು ನನ್ನ ತುಟಿಗಳನ್ನು ರಕ್ಷಿಸಲಿ. ಉಪದ್ರವಗಳೆಂಬ ಸಮುದ್ರವನ್ನು ದಾಟಲು ಸೇತುವೆಯಂತೆ ಇರತಕ್ಕ ಗುರುಗಳು ನನ್ನ ಹಲ್ಲುಗಳನ್ನು ಯಾವಾಗಲೂ ರಕ್ಷಿಸಲಿ.

**ನಿರಸ್ತದೋಷೋ ಮೇ ಪಾತು ಕಪೋಲೌ ಸರ್ವಪಾಲಕಃ ।**
**ನಿರವದ್ಯಮಹಾವೇಷಃ ಕಂಠಂ ಮೇಽವತು ಸರ್ವದಾ ॥೧೨॥**

೧೨. ನಾಶಮಾಡಲ್ಪಟ್ಟ ಆಶೇಷ ದ್ವೇಷ ಮುಂತಾದ ದೋಷವುಳ್ಳವರಾದ, ಎಲ್ಲರನ್ನು ಕಾಪಾಡತಕ್ಕ ಗುರುಗಳು ನನ್ನ ಗಲ್ಲಗಳನ್ನು ಕಾಪಾಡಲಿ. ದುರ್ಲಕ್ಷಣಗಳಿಲ್ಲದಿರುವ ಆಕಾರವುಳ್ಳ ಗುರುಗಳು ನನ್ನ ಕುತ್ತಿಗೆಯನ್ನು ಯಾವಾಗಲೂ ರಕ್ಷಿಸಲಿ.

**ಕರ್ಣಮೂಲೇ ತು ಪ್ರತ್ಯರ್ಥಿಮೂಕತ್ವಕರವಾಙ್ಮಯು ।**
**ಬಹುವಾದಿಜಯೀ ಪಾತು ಹಸ್ತೌ ಸತ್ತತ್ವವಾದಕೃತ್ ॥೧೩॥**

೧೩. ಶತ್ರುಗಳನ್ನು ಮೂಕರನ್ನಾಗಿ ಮಾಡತಕ್ಕ ವಾಕ್ಯವುಳ್ಳ ಗುರುಗಳು ಕರ್ಣಮೂಲಗಳನ್ನು, ಬಹಳ ವಾದಿಗಳನ್ನು ಗೆದ್ದ, ಉತ್ತಮವಾದ ತತ್ವವಾದವನ್ನು ಮಾಡುವ ಗುರುಗಳು ನನ್ನ ಕೈಗಳನ್ನು ಕಾಪಾಡಲಿ.

**ಕರೌ ರಕ್ಷತು ಮೇ ವಿದ್ವತ್ ಪರಿಜ್ಞೇಯಮಹಾಗುಣಃ ।**
**ವಾಗ್ವೈಖರೀಭವ್ಯಶೇಷಜಯೀ ವಕ್ಷಸ್ಥಲಂ ಮಮ ॥೧೪॥**

೧೪. ವಿದ್ವಾಂಸರಿಂದ ತಿಳಿಯುವುದಕ್ಕೆ ಯೋಗ್ಯಗಳಾದ ಮಹಾಗುಣವುಳ್ಳ ಗುರುಗಳು ನನ್ನ ಮುಂಗೈಗಳನ್ನು ರಕ್ಷಿಸಲಿ. ವಾಗ್ವೈಖರೀ ಎಂಬ ಗ್ರಂಥದಿಂದ ಚತುರನಾದ ಶೇಷನೆಂಬ ಅದ್ವೈತವಾದಿಯನ್ನು ಗೆದ್ದ ಗುರುಗಳು, ನನ್ನ ಎದೆಯನ್ನು ಕಾಪಾಡಲಿ.

**ಸ್ತ್ರೀಸಂತಾನಸಂಪತ್ತಿಭಕ್ತಿಜ್ಞಾನಾದಿವೃದ್ಧಿಕೃತ್ ।**
**ಸ್ತನೌ ರಕ್ಷತು ಮೇ ನಿತ್ಯಂ ಶರೀರಾವದ್ಯಹಾನಿಕೃತ್ ॥೧೫॥**

೧೫. ಹೆಂಡತಿ ಮಕ್ಕಳು ಸಂಪತ್ತು ಭಕ್ತಿಜ್ಞಾನಗಳೇ ಮೊದಲಾಗಿವುಳ್ಳ ವಾಗ್ದೇಹಪಾಟವಾದಿಗಳ ವೃದ್ಧಿಯನ್ನು ಮಾಡತಕ್ಕ, ಶರೀರದಲ್ಲಿರತಕ್ಕ ದೋಷಗಳನ್ನು ನಾಶಮಾಡತಕ್ಕ ಗುರುಗಳು ನನ್ನ ಸ್ತನಗಳನ್ನು ನಿತ್ಯದಲ್ಲಿ ರಕ್ಷಿಸಲಿ. (ಇವುಗಳನ್ನು ಕೊಡತಕ್ಕವರೆಂದು ಅಪ್ಪಣಾಚಾರ್ಯರು ಸ್ತೋತ್ರ ಮಾಡುವುದರಿಂದ ಏನು ತಿಳಿಯುತ್ತದೆ— ಧರ್ಮಕಾರ್ಯಕ್ಕೆ ಸಹಚಾರಿಣೀ (ಹೆಂಡತಿ) ಬೇಕು. ಪಿತೃಋಣ ತೀರುವುದಕ್ಕೆ ಸಂತಾನ ಬೇಕು. ಇವರ ರಕ್ಷಣೆಗೆ ಸಂಪತ್ತು ಬೇಕು. ಇವುಗಳಿದ್ದರೂ ಅಹಂಕಾರವಿರಬಾರದಾದ್ದರಿಂದ ಭಕ್ತಿ ಬೇಕು. ಭಕ್ತಿಹುಟ್ಟಬೇಕಾದರೆ ಜ್ಞಾನಬೇಕು. ಭಕ್ತಿ ಎಂದರೆ ಶ್ರೀಮನ್ನ್ಯಾಯ ಸುಧಾದಲ್ಲಿ ಹೇಳಿದಂತೆ ಶ್ರೀಪರಮಾತ್ಮನ ಕಲ್ಯಾಣಗುಣಗಳ ಜ್ಞಾನಯುಕ್ತವಾದ, ತನ್ನ ದೇಹ, ತನ್ನವರು ಮುಂತಾದ ಎಲ್ಲಾ ತನ್ನ ವಸ್ತುಗಳಿಗಿಂತಲೂ ಹೆಚ್ಚಾದ, ಎಷ್ಟು ವಿಘ್ನಗಳು ಬಂದರೂ ಅಡ್ಡಿಬರದೇ ಇರತಕ್ಕ, ಅವಿಚ್ಛಿನ್ನ

ವಾದ ಪ್ರೇಮಪ್ರವಾಹವೇ ಭಕ್ತಿಯು. ಅಂತಹ ಭಕ್ತಿಗೆ ಜ್ಞಾನವು ಕಾರಣವು. ಇವೇ ಮೊದಲಾದ ಅಂದರೆ ವೈರಾಗ್ಯಾದಿಗಳ ವೃದ್ಧಿಯನ್ನು ಮಾಡತಕ್ಕವರು ಎಂದು ತಿಳಿಯುತ್ತದೆ).

**ಪುಣ್ಯವರ್ಧನಪಾದಾಬ್ಜಾಭಿಷೇಕಜಲಸಂಚಯಃ ।**
**ನಾಭಿಂ ರಕ್ಷತು ಮೇ ಪಾರ್ಶ್ವೌ ದ್ಯುನದೀತುಲ್ಯಸದ್ಗುಣಃ ॥೧೬॥**

೧೬. ಶ್ರೀರಾಘವೇಂದ್ರಸ್ತೋತ್ರದಲ್ಲಿ ಹೇಳಿದಂತೆ ಭಾಗೀರಥಿಯ ಸ್ನಾನ ಪಾನಾದಿಗಳಿಂದ ಬರತಕ್ಕ ಪುಣ್ಯದಕಿಂತಲೂ ಹೆಚ್ಚು ಪುಣ್ಯವನ್ನು ಬೆಳೆಸತಕ್ಕ ಪಾದಕಮಲಗಳ ಅಭಿಷೇಕದ ನೀರಿನ ಸಮೂಹವುಳ್ಳ ಗುರುಗಳು ನನ್ನ ಹೊಕ್ಕು ಳನ್ನು ರಕ್ಷಿಸಲಿ. ಇದರಲ್ಲಿ ಒಂದು ಸಂಶಯು ಬರಬಹುದು. ಭಾಗೀರಥೀನದಿಯು ಶ್ರೀವಿಷ್ಣುಪಾದದಿಂದ ಹುಟ್ಟಿದ್ದು. ಅದಕ್ಕಿಂತಲೂ ಶ್ರೀಗುರುರಾಜರ ವೃಂದಾ ವನದ ಪಾದೋದಕವು ಹೆಚ್ಚಾಗುವುದು ಹೇಗೆ ಎಂಬ ಸಂಶಯವು ಕೆಲವರಿಗೆ ಬರಬಹುದು. ಇದಕ್ಕೆ ನಾಲ್ಕು ತರಹ ಪರಿಹಾರವಿದೆ —

೧. ಅಪರೋಕ್ಷಜ್ಞಾನಿಗಳು ಸ್ನಾನಕ್ಕೆ ಹೋಗುವುದು—ಏಕೆಂದರೆ ಮನುಷ್ಯರು ಸ್ನಾನಮಾಡಿ ಬಿಟ್ಟಿರತಕ್ಕ ಪಾಪಗಳು ನದಿಯಲ್ಲಿರುತ್ತವೆ. ಅವು ಗಳನ್ನು ಪರಿಹರಿಸುವುದರ ಸಲುವಾಗಿ ಎಂದು "ತೀರ್ಥೀಕುರ್ವಂತಿ ತೀರ್ಥಾನಿ" ಎಂಬ ಶ್ಲೋಕದಿಂದ ಹೇಳುತ್ತದೆ. "ಅಪರೋಕ್ಷೀಕೃತಶ್ರೀಶಃ" ಎಂಬ ಅಪ್ಪಣಾ ಚಾರ್ಯರ ವಾಕ್ಯದಿಂದ ಯಾವಾಗಲೂ ಶ್ರೀಹರಿಯ ದರ್ಶನವುಳ್ಳವರ, ವಾಯು ದೇವರ ಆವೇಶಯುಕ್ತರಾದವರ, ಪಾದೋದಕಕ್ಕೆ ಇಂತಹ ಮಹಿಮೆ ಇರುವುದು ಆಶ್ಚರ್ಯವಲ್ಲ.

೨. ಈ ವೃಂದಾವನದಲ್ಲಿ ರಾಮನರಹರಿ ಕೃಷ್ಣಕೃಷ್ಣ (ವೇದವ್ಯಾಸರು) ಸನ್ನಿಹಿತರಾಗಿದ್ದಾರೆಂದು ಅಪರೋಕ್ಷಜ್ಞಾನಿಗಳಾದ ದಾಸರ ವಾಕ್ಯವಿದ್ದ ಮೇಲೆ ನಾಲ್ಕು ಮೂರ್ತಿಗಳ ಮೇಲೆ ಅಭಿಷೇಕದ ಜಲವು ಅಧಿಕವಲ್ಲವೇ ?

೩. ಆ ವೃಂದಾವನವು ಕೇವಲ ಸಾಲಿಗ್ರಾಮಗಳ ಸಂಪುಟವಿದ್ದಂತೆ. ಆ ವೃಂದಾವನದಲ್ಲಿ ಕಲ್ಲು ಮಣ್ಣುಗಳು ಯಾವುವೂ ಇಲ್ಲ. ಆದ್ದರಿಂದ

ಸಾವಿರಾರು ಸಾಲಿಗ್ರಾಮಗಳ ಅಭಿಷೇಕದ ಜಲವು ಶ್ರೀಭಾಗೀರಥೀನದಿಯ ನೀರಿನ ಕಿಂತಲೂ ಅಧಿಕವೆಂದು ಹೇಳುವುದಕ್ಕೆ ಯಾವ ಸಂಶಯವೂ ಬೇಡ.

೪. 'ಅಲವಬೋಧ ಮಿಕ್ಕಾದ ಮಹಾಮುನಿಗಳು ಸಾಂಶರು ಇಲ್ಲಿ ನೆಲೆಸಿಹರು' ಎಂಬ ದಾಸರ ಪದದಿಂದ ವಾಯುದೇವರ ಪಾದೋದಕವು ಗಂಗೆ ಕಿಂತಲೂ ಅಧಿಕವು.

**ಪೃಷ್ಠಂ ರಕ್ಷತು ಮೇ ನಿತ್ಯಂ ತಾಪತ್ರಯವಿನಾಶಕೃತ್ ।**
**ಕಟಿಂ ಮೇ ರಕ್ಷತು ಸದಾ ವಂಧ್ಯಾ ಸತ್ಪುತ್ರದಾಯಕಃ ॥೧೭॥**

೧೭. ವಂಧ್ಯಾ ಅಂದರೆ ಬಂಜೆಯರು ನಾಲ್ಕು ಪ್ರಕಾರ :—

(೧) ಕದಲೀ ವಂಧ್ಯಾ ಅಂದರೆ–ಒಬ್ಬ ಮಗ ಅಥವಾ ಒಬ್ಬ ಮಗಳನ್ನು ಹಡೆದವಳು. (೨) ಕಾಕವಂಧ್ಯಾ ಅಂದರೆ–ಹಡೆದ ಮಕ್ಕಳೆಲ್ಲಾ ಮೃತರಾಗು ತ್ತಿದ್ದರೆ (೩) ಕನ್ಯಾವಂಧ್ಯಾ ಎಂದರೆ ಕೇವಲ ಹೆಣ್ಣುಗಳನ್ನೇ ಹಡಿಯತಕ್ಕ ವಳು. (೪) ಮಹಾವಂಧ್ಯಾ ಎಂದರೆ ಯಾವ ಕಾಲದಲ್ಲಿಯೂ ಹಡಿಯದೇ ಇರತಕ್ಕವಳು. ಇಲ್ಲಿ ವಂಧ್ಯಾಶಬ್ದದಿಂದ ನಾಲ್ಕು ತರಹದ ವಂಧ್ಯಾ ಸ್ತ್ರೀಯರಿಗೂ, ಮಾತಾಪಿತೃಭಕ್ತನಾದ ಗುಣಶೀಲನಾದ ದೀರ್ಘಾಯುಷ್ಯ ವುಳ್ಳ ಮಗನನ್ನು ಕೊಡತಕ್ಕ ಗುರುಗಳು ನನ್ನ ಸೊಂಟವನ್ನು ಯಾವಾಗಲೂ ರಕ್ಷಿಸಲಿ. ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ಎಂಬ ಮೂರು ತಾಪ ಗಳನ್ನು ನಾಶಮಾಡತಕ್ಕ ಗುರುಗಳು ಪೃಷ್ಠಭಾಗವನ್ನು ದಿನಾಲೂ ಕಾಪಾಡಲಿ.

**ಜಘನಂ ಮೇಽವತು ಸದಾ ವ್ಯಂಗಸ್ವಂಗಸಮೃದ್ಧಿಕೃತ್ ।**
**ಗುಹ್ಯಂ ರಕ್ಷತು ಮೇ ಪಾಪಗ್ರಹಾರಿಷ್ಟವಿನಾಶಕೃತ್ ॥೧೮॥**

೧೮. ಹುಟ್ಟಿದಾಗಿನಿಂದಲೂ ಅಥವಾ ಮಧ್ಯದಲ್ಲಿ ಆಗಲಿ ಅಂಗಗಳಿಂದ ರಹಿತರಾದವರಿಗೆ ಒಳ್ಳೇ ಅವಯವಗಳ ಪೂರ್ಣತೆಯನ್ನು ಮಾಡತಕ್ಕವರು ನಾಭಿಯ ಕೆಳಗಿನ ಭಾಗದ ಹೊಟ್ಟೆಯನ್ನು ಸಹ ಯಾವಾಗಲೂ ಕಾಪಾಡಲಿ. ಪಾಪಗಳಿಂದ ಮತ್ತು ಗ್ರಹಗಳಿಂದುಂಟಾಗುವ ಅರಿಷ್ಟವನ್ನು ನಾಶಮಾಡತಕ್ಕ ಗುರುಗಳು ನನ್ನ ಗುಹ್ಯೇಂದ್ರಿಯವನ್ನು ಕಾಪಾಡಲಿ.

**ಭಕ್ತೌಘವಿಧ್ವಂಸಕರನಿಜಮೂರ್ತಿಪ್ರದರ್ಶಕಃ ।**
**ಮೂರ್ತಿಮಾನ್ ಪಾತು ಮೇ ರೋಮ**
**ರಾಘವೇಂದ್ರೋ ಜಗದ್ಗುರುಃ ॥೧೯॥**

೧೯. ಭಕ್ತರ ಸಮೂಹದ ಪಾಪವನ್ನು ಪರಿಹಾರ ಮಾಡತಕ್ಕವರಾದ ಮತ್ತು ತಮ್ಮ ಸ್ವರೂಪವನ್ನು ಭಕ್ತರಿಗೆ ಸ್ವಪ್ನಾದಿಗಳಲ್ಲಿ ತೋರಿಸತಕ್ಕ, ಮೂರ್ತಿಮಂತರಾದ, ಜಗತ್ತಿಗೆ ಗುರುಗಳಾದ, ಶ್ರೀರಾಘವೇಂದ್ರಗುರುಗಳು ನನ್ನ ರೋಮಗಳ ಸಮೂಹವನ್ನು ಕಾಪಾಡಲಿ.

**ಸರ್ವತಂತ್ರಸ್ವತಂತ್ರೋಽಸೌ ಜಾನುನೀ ಮೇ ಸದಾಽವತು ।**
**ಜಂಘೇ ರಕ್ಷತು ಮೇ ನಿತ್ಯಂ ಶ್ರೀಮಧ್ವಮತವರ್ಧನಃ ॥೨೦॥**

೨೦. ಎಲ್ಲಾ ಸಿದ್ಧಾಂತಗಳಲ್ಲಿ ಇನ್ನೊಬ್ಬರ ಅಪೇಕ್ಷೆ ಇಲ್ಲದೇ ಇರತಕ್ಕವರಾದ ಅಥವಾ ಇತರ ಸಿದ್ಧಾಂತಗಳನ್ನು ಗೆಲ್ಲುವುದರಲ್ಲಿ ಇನ್ನೊಬ್ಬರ ಅಪೇಕ್ಷೆ ಇಲ್ಲದೇ ಇರುವ ಶ್ರೀಗುರುಗಳು ನನ್ನ ಮೊಳಕಾಲುಗಳನ್ನು ಯಾವಾಗಲೂ ಕಾಪಾಡಲಿ. ಶ್ರೀಮಧ್ವಾಚಾರ್ಯರ ಮತವನ್ನು ಬೆಳೆಸಿದ ಗುರುಗಳು ನನ್ನ ಮೀನುಗಂಡಗಳನ್ನು ಕಾಪಾಡಲಿ.

**ವಿಜಯೀಂದ್ರಕರಾಬ್ಜೋತ್ಥ ಸುಧೀಂದ್ರವರಪುತ್ರಕಃ ।**
**ಗುಲ್ಫೌ ಶ್ರೀರಾಘವೇಂದ್ರೋ ಮೇ ಯತಿರಾಟ್ ಸರ್ವದಾವತು ॥೨೧॥**

೨೧. ಶ್ರೀವಿಜಯೀಂದ್ರಕರಕಮಲದಿಂದ ಉತ್ಪನ್ನರಾದ, ಶ್ರೀಸುಧೀಂದ್ರತೀರ್ಥರ ಶ್ರೇಷ್ಠಪುತ್ರರಾದ, ಯತಿಶ್ರೇಷ್ಠರಾದ ಶ್ರೀರಾಘವೇಂದ್ರಗುರುಗಳು ನನ್ನ ಗುಲ್ಫಗಳನ್ನು ಯಾವಾಗಲೂ ಕಾಪಾಡಲಿ.

**ಸಂಶಯ ಪರಿಹಾರ**—ವಿಜಯೀಂದ್ರರ ಕೈಯಿಂದ ಹುಟ್ಟಿದವರು ಶ್ರೀ ಸುಧೀಂದ್ರರು. ಹೇಗೆ ಎಂದು ಸಂಶಯ ಬಂದರೆ—ಆಶ್ರಮಗುರುಗಳು ಶಿಷ್ಯನ ತಲೆಯ ಮೇಲೆ ಕರಕಮಲವನ್ನಿಟ್ಟು ಪ್ರಣವಮಂತ್ರವನ್ನು ಉಪದೇಶಿಸುವಾಗ, ಶಿಷ್ಯನಿಗೆ ಗೃಹಸ್ಥಾಶ್ರಮದ ಸಂಬಂಧವು ನಿವೃತ್ತವಾಗುತ್ತದೆ. ಆಗ ಹೊಸ

ಜನ್ಮವು ಬಂದಂತೇ. ಆದ್ದರಿಂದ ಕರಕಮಲಸಂಜಾತ, ವರಪುತ್ರ ಎಂದು ಹೇಳುವ ವಾಡಿಕೆಯು ಲೋಕದಲ್ಲಿ, ಶಾಸ್ತ್ರದಲ್ಲಿ ಸಹ ಇರುತ್ತದೆ.

**ಪಾದೌ ರಕ್ಷತು ಮೇ ಸರ್ವಭಯಹಾರೀ ಕೃಪಾನಿಧಿಃ |**
**ಕರಪಾದಾಂಗುಲೀಸ್ಸರ್ವಾ ಮಮಾವತು ಜಗದ್ಗುರುಃ ||೨೨||**

೨೨. ಐಹಿಕ-ಪಾರತ್ರಿಕಭಯವನ್ನು ಪರಿಹಾರ ಮಾಡತಕ್ಕ ದಯಾನಿಧಿಗಳಾದ ಗುರುಗಳು ನನ್ನ ಕಾಲುಗಳನ್ನು ರಕ್ಷಿಸಲಿ. ಜಗದ್ಗುರುಗಳಾದ ಶ್ರೀರಾಘವೇಂದ್ರಗುರುಸಾರ್ವಭೌಮರು ನನ್ನ ಕೈಕಾಲುಗಳ ಬೆರಳುಗಳನ್ನು ರಕ್ಷಿಸಲಿ.

**ಪ್ರತಿವಾದಿಜಯಸ್ವಾಂತಭೇದಚಿಹ್ನಾದರೋ ಗುರುಃ |**
**ನಖಾನವತು ಮೇ ಸರ್ವಾನ್ ಸರ್ವಶಾಸ್ತ್ರವಿಶಾರದಃ ||೨೩||**

೨೩. ಪ್ರತಿವಾದಿಗಳಿಗೆ ಇರತಕ್ಕ, (ಇವರನ್ನು ಗೆಲ್ಲಬೇಕೆಂದಿರತಕ್ಕ) ಮನಸ್ಸಿನ ವಿದಾರಣದ ಗುರುತಿನಲ್ಲಿ ಆಸಕ್ತಿವುಳ್ಳವರು, (ಪ್ರತಿವಾದಿಗಳನ್ನು ಗೆಲ್ಲುವುದರಲ್ಲಿ ಆದರ ಉಳ್ಳವರು.) ಎಲ್ಲಾ ಶಾಸ್ತ್ರಗಳಲ್ಲಿ ಕುಶಲರು ಆಗಿರತಕ್ಕ ಶ್ರೀಗುರುಗಳು ನನ್ನ ಇಪ್ಪತ್ತು ಉಗುರುಗಳನ್ನು ಕಾಪಾಡಲಿ. ಇವರ ವಿರುದ್ಧ ಪಕ್ಷದವರು ಶ್ರೀಗುರುಗಳನ್ನು ಗೆಲ್ಲಬೇಕೆಂದು ಮನಸ್ಸುಮಾಡಿದಾಗ ಆ ಮನಸ್ಸನ್ನು ಸೀಳಿಬಿಡತಕ್ಕವರು. ಅಂದರೆ ಇವರನ್ನು ಗೆಲ್ಲುವುದು ಸಾಧ್ಯವಲ್ಲ ವೆಂಬ ತಾತ್ಪರ್ಯ.

**ಅಪರೋಕ್ಷೀಕೃತಶ್ರೀಶಃ ಪ್ರಾಚ್ಯಾಂ ದಿಶಿ ಸದಾವತು |**
**ಸ ದಕ್ಷಿಣೇ ಚಾವತು ಮಾಂ ಸಮುಪೇಕ್ಷಿತಭಾವಜಃ ||೨೪||**

೨೪. ನಾರದರ ಉಪದೇಶವಾದಾಗಿನಿಂದ ಪ್ರಹ್ಲಾದಾವತಾರವನ್ನಾರಂಭಿಸಿ ಇದುವರೆಗೂ ಶ್ರೀಪರಮಾತ್ಮನನ್ನು ನೋಡುತ್ತಲೇ ಇರತಕ್ಕವರು ಕರ್ಮಜದೇವತೆಗಳಲ್ಲಿ ಇಂಥಾವರು ಯಾರೂ ಇಲ್ಲ. ಇಂಥಾ ಗುರುಗಳು ಪೂರ್ವದಿಕ್ಕಿನಲ್ಲಿ ಯಾವಾಗಲೂ ರಕ್ಷಿಸಲಿ. ಮನ್ಮಥನು ಈ ಗುರುಗಳನ್ನು ವಶಪಡಿಸಿಕೊಳ್ಳಬೇಕೆಂದು ಪ್ರಯತ್ನಿಸಿದನು. ಸಾಧ್ಯವಾಗದೇ ತಿರುಗಿ

ಹೋದನು. ಆದ್ದರಿಂದ ತಿರಸ್ಕರಿಸಲ್ಪಟ್ಟ, ಪರಮಾತ್ಮನಿಂದ ಹುಟ್ಟಿದವನು ಅಥವಾ ಮನಸ್ಸಿನಿಂದ ಹುಟ್ಟಿದ ಮನ್ಮಥವುಳ್ಳ, ಶ್ರೀಗುರುಗಳು ದಕ್ಷಿಣದಿಕ್ಕಿನಲ್ಲಿ ಕಾಪಾಡಲಿ.

**ಅಪೇಕ್ಷಿತಪ್ರದಾತಾ ಚ ಪ್ರತೀಚ್ಯಾಮವತು ಪ್ರಭುಃ ।**
**ದಯಾದಾಕ್ಷಿಣ್ಯವೈರಾಗ್ಯವಾಕ್ಪಾಟವಮುಖಾಂಕಿತಃ ॥೨೫॥**

೨೫. ನಮ್ಮ ಇಚ್ಛಿತಾರ್ಥವನ್ನು ಹೆಚ್ಚಾಗಿ ಕೊಡತಕ್ಕ ಅಥವಾ ಪರಮಾತ್ಮನ ಜ್ಞಾನವನ್ನೂ ಸಹ ಕೊಡತಕ್ಕ, ವಾದದಲ್ಲಿ ಸಮರ್ಥರಾದ ಶ್ರೀಗುರುಗಳು ಪಶ್ಚಿಮದಿಕ್ಕಿನಲ್ಲಿ ಕಾಪಾಡಲಿ. ಇದರಿಂದ ಐಹಿಕ ಪಾರತ್ರಿಕ ಸುಖವನ್ನು ಕೊಡತಕ್ಕವರೆಂದು ಸಿದ್ಧವಾಗುತ್ತದೆ. ಪ್ರತಿಫಲವನ್ನು ಅಪೇಕ್ಷಿಸದೆ ಇತರರ ದುಃಖವನ್ನು ಪರಿಹರಿಸಬೇಕೆಂಬ ಇಚ್ಛೆ, ಮನಸ್ಸು, ಮಾತು, ನಡತೆ ಈ ಮೂರರಿಂದಲೂ ಒಂದೇ ವಿಧವಾಗಿರುವಿಕೆ. ಶ್ರೀಹರಿಯಿಂದ ಭಿನ್ನವಾದ ವಸ್ತುಗಳಲ್ಲಿ ಆಶೆಯನ್ನು ಬಿಟ್ಟಿರುವಿಕೆ, ಮಾತಿನಲ್ಲಿ ಸ್ಪಷ್ಟತೆ ಮತ್ತು ಸಾಮರ್ಥ್ಯ ಇವೇ ಮೊದಲಾದವುಗಳಿಂದ ಅಲಂಕೃತರಾದ ಶ್ರೀಗುರುಗಳು ಪಶ್ಚಿಮದಿಕ್ಕಿನಲ್ಲಿ ರಕ್ಷಿಸಲಿ.

**ಸದೋದೀಚ್ಯಾಮವತು ಮಾಂ ಶಾಪಾನುಗ್ರಹಶಕ್ತಿಮಾನ್ ।**
**ನಿಖಿಲೇಂದ್ರಿಯದೋಷಘ್ನೋ ಮಹಾನುಗ್ರಹಕೃದ್ಗುರುಃ ॥೨೬॥**

೨೬. ಸಮಸ್ತ ಇಂದ್ರಿಯದೋಷಗಳನ್ನು ನಾಶಮಾಡತಕ್ಕ ಪೂರ್ಣಾನುಗ್ರಹವನ್ನು ಮಾಡತಕ್ಕ, ಶಾಪಾನುಗ್ರಹಶಕ್ತಿವುಳ್ಳವರಾದ ಗುರುಗಳು ನನ್ನನ್ನು ಯಾವಾಗಲೂ ಉತ್ತರದಿಕ್ಕಿನಲ್ಲಿ ಕಾಪಾಡಲಿ. (ವಿರೋಧಿಗಳಿಗೆ ಕೆಡಕಾಗಲಿ ಎಂದು ಶಪಿಸುವ ಸಾಮರ್ಥ್ಯವುಂಟಾದರೂ ಒಬ್ಬರಿಗೂ ಶಾಪವನ್ನು ಕೊಟ್ಟಿಲ್ಲ. ಗ್ರಂಥಗಳಲ್ಲಿ ಸಹ ಇನ್ನೊಬ್ಬರನ್ನು ದೂಷಿಸುವುದಿಲ್ಲ. ಇದೇ ಮಹಾ ಗುರುಗಳ ಲಕ್ಷಣ).

**ಅಧಶ್ಚೋರ್ಧ್ವಂ ಚಾವತು ಮಾಮಷ್ಟಾಕ್ಷರಮನೂದಿತಃ ।**
**ಆತ್ಮಾತ್ಮೀಯಾಘರಾಶಿಘ್ನೋ ಮಾಂ ರಕ್ಷತು ವಿದಿಕ್ಷು ಚ ॥೨೭॥**

೨೭. ಅಷ್ಟಾಕ್ಷರಮಂತ್ರದಿಂದ ಪ್ರತಿಪಾದಿತರಾದ (ಶ್ರೀರಾಘವೇಂದ್ರಾಯ ನಮಃ ಎಂಬ ಮಂತ್ರದಿಂದ ಪ್ರತಿಪಾದಿತರಾದ) ಶ್ರೀಗುರುಗಳು ಕೆಳಗೆ ಮೇಲೆ ಸಹ ಕಾಪಾಡಲಿ. ನನ್ನ ದೇಹದಿಂದಲೂ ಮನಸ್ಸಿನಿಂದಲೂ ನನ್ನ ಸಲುವಾಗಿ ಮಾಡಿದ ಮತ್ತು ನನ್ನವರಾದ ಹೆಂಡತಿ ಮಕ್ಕಳು ಮುಂತಾದವರಿಂದ ಅಥವಾ ಅವರ ಸಲುವಾಗಿ ಮಾಡಿದ ಪಾಪಗಳ ಸಮೂಹವನ್ನು ನಾಶಮಾಡತಕ್ಕ ಗುರುಗಳು ನನ್ನನ್ನು ವಿದಿಕ್ಕುಗಳಲ್ಲಿ ಸಹ ರಕ್ಷಿಸಲಿ.

**ಚತುರ್ಣಾಂ ಚ ಪುಮರ್ಥಾನಾಂ ದಾತಾ ಪ್ರಾತಃಸದಾವತು ।**
**ಸಂಗಮೇವತು ಮಾಂ ನಿತ್ಯಂ ತತ್ವವಿತ್ ಸರ್ವಸೌಖ್ಯಕೃತ್ ॥೨೮॥**

೨೮. ಧರ್ಮ, ಅರ್ಥ, ಕಾಮ (ಅರ್ಥ ಕಾಮಗಳೆಂದರೆ ಸತ್ಕಾರ್ಯಕ್ಕೆ ಉಪಯುಕ್ತವಾದ ದ್ರವ್ಯ ಮತ್ತು ಸತ್ಕಾರ್ಯಗಳಲ್ಲಿ ಅಪೇಕ್ಷೆ) ಮತ್ತು ಮೋಕ್ಷ ಈ ರೀತಿಯಾಗಿ ನಾಲ್ಕು ಪುರುಷಾರ್ಥಗಳನ್ನು ಕೊಡತಕ್ಕ ಶ್ರೀಗರುಗಳು ಯಾವಾಗಲೂ ಪ್ರಾತಃಕಾಲದಲ್ಲಿ ರಕ್ಷಿಸಲಿ. ತತ್ವವನ್ನು ಬಲ್ಲ, ಎಲ್ಲಾಸೌಖ್ಯಗಳನ್ನು ಕೊಡತಕ್ಕ ಶ್ರೀಗುರುಗಳು ಸಂಗಮಕಾಲದಲ್ಲಿ ನಿತ್ಯದಲ್ಲಿ ನನ್ನನ್ನು ಕಾಪಾಡಲಿ.

**ಮಧ್ಯಾಹ್ನೇಗಮ್ಯಮಹಿಮಾ ಮಾಂ ರಕ್ಷತು ಮಹಾಯಶಾಃ ।**
**†ಮೃತಪೋತ ಪ್ರಾಣದಾತಾ ಸಾಯಾಹ್ನೇ ಮಾಂ ಸದಾವತು ॥೨೯॥**

೨೯. ಜನರಿಂದ ತಿಳಿಯಲು ಅಸಾಧ್ಯವಾದ ಮಾಹಾತ್ಮ್ಯವುಳ್ಳವರು ಅಪಾರವಾದ ಕೀರ್ತಿಯುಳ್ಳವರು ಆದ ಶ್ರೀಗುರುಗಳು ಮಧ್ಯಾಹ್ನದಲ್ಲಿ ನನ್ನನ್ನು ಕಾಪಾಡಲಿ. ಸತ್ತ ಹುಡುಗನಿಗೆ ಪ್ರಾಣದಾತರಾದ ಶ್ರೀಗುರುಗಳು ಸಾಯಂಕಾಲದಲ್ಲಿ ಯಾವಾಗಲೂ ಕಾಪಾಡಲಿ.

ಇದರ ಇತಿಹಾಸವು ಹೀಗಿದೆ—ಒಬ್ಬ ಗೃಹಸ್ಥರು ಶ್ರೀಗುರುರಾಜರನ್ನು ತಮ್ಮ ಮನೆಯಲ್ಲಿ ಶ್ರೀಮೂಲರಾಮದೇವರ ಪೂಜೆಯಾಗಬೇಕೆಂದು

---

ಪಾಠಾಂತರ—† **ಚೂತೇ ಮೃತಾರ್ಭಕ ಪ್ರಾಣದಾತಾ ಸಾಯಂ ಸದಾವತು ॥**

ಪ್ರಾರ್ಥಿಸಲು ಶ್ರೀಗುರುರಾಜರು ಅಂಗೀಕರಿಸಿ ಅವರ ಮನೆಯಲ್ಲಿ ಪೂಜಾ ಮಾಡಿದರು. ಅನಂತರ ಭೋಜನವಾದ ಮೇಲೆ ಶ್ರೀಗುರುಗಳು ತೀರ್ಥವನ್ನು ಕೊಡುವುದರ ಸಲುವಾಗಿ ಗೃಹಸ್ಥನನ್ನು ಕರೆಯಲು ಅವರು ತಮ್ಮ ಮಗುವನ್ನು ಕರೆದುಕೊಂಡು ಬರಲು ಹುಡುಕಿದರು. ಊಟವಾದ ಮೇಲೆ ಇಲ್ಲೇ ಇದ್ದ ಮಗು ಎಲ್ಲಿ ಹೋಯಿತೆಂದು ಬಹಳ ಕಡೆಯಲ್ಲಿ ಹುಡುಕಿದ ಮೇಲೆ ಬಹಳ ಹೊತ್ತಿನಮೇಲೆ ಸಂಶಯ ಬಂದು ದೊಡ್ಡದಾದ ಮಾವಿನ ಹಣ್ಣಿನ ರಸದ ಪಾತ್ರೆಯಲ್ಲಿ ಹುಡುಕಲು ಸಿಕ್ಕ ಮೃತವಾದ ಕೂಸನ್ನು ತಂದು ಶ್ರೀಗುರುಗಳ ಮುಂದೆ ಮಲಗಿಸಲು ಶ್ರೀಗುರುಗಳು ತೀರ್ಥಪ್ರೋಕ್ಷಣೆಮಾಡಿ "ಮುಂಚಾ-ಮಿತ್ಯಾ" ಎಂಬ ಮಂತ್ರವನ್ನು ಉಚ್ಚರಿಸಿದ ಕೂಡಲೆ ಮಂತ್ರಸಿದ್ಧಿಯುಳ್ಳ, ವಾಯ್ವಾವೇಶಯುತರಾದ, ಕರ್ಮಜದೇವತೆಗಳಾದ ಶ್ರೀಗುರುಗಳ ಮಹಿಮೆಯಿಂದ ಆ ಮಗು ಎದ್ದು ಕೂತಿತು. ಅದನ್ನು ನೋಡಿ ಎಲ್ಲರೂ ಆನಂದ ಮತ್ತು ಆಶ್ಚರ್ಯದಿಂದ ಯುಕ್ತರಾದರು. ಇಂತಹ ಶ್ರೀಗುರುಗಳು ನಮ್ಮನ್ನು ಸಾಯಂಕಾಲದಲ್ಲಿ ಯಾವಾಗಲೂ ರಕ್ಷಿಸಲಿ.

**ವೇದಿಸ್ಥಪುರುಷೋಜ್ಜೀವೀ ನಿಶೀಥೇ ಪಾತು ಮಾಂ ಗುರುಃ ॥೩೦॥**

೩೦. ವೇದಿಕಾ (ಕಟ್ಟೆ) ದಲ್ಲಿರತಕ್ಕ ಮನುಷ್ಯನನ್ನು ಬದುಕಿಸಿದ ಶ್ರೀಗುರುಗಳು ಅರ್ಧರಾತ್ರಿಯಲ್ಲಿ ನನ್ನನ್ನು ರಕ್ಷಿಸಲಿ. ಇದರ ಇತಿಹಾಸವು ಹೀಗಿದೆ—ಶ್ರೀಗುರುರಾಜರು ಸಂಚಾರಕ್ಕೆ ದಯಮಾಡಿಸಿದಾಗ ಪಾಲಕಿಯಲ್ಲಿ ಕೂತು ಸಂಚರಿಸುವಾಗ ಪಾಲಕಿಯನ್ನು ಹೊತ್ತಿರುವ ಆಳುಗಳಿಗೆ ಶ್ರಮವಾದ್ದರಿಂದ ಶ್ರೀ ಶ್ರೀ ಗುರುಗಳ ಆಜ್ಞೆಯನ್ನು ಸ್ವೀಕರಿಸಿ ಒಂದು ತೋಟದಲ್ಲಿ ಮಾವಿನ ಗಿಡದ ಬುಡದಲ್ಲಿ ಕಟ್ಟೆಯ ಮೇಲೆ ತಣ್ಣಗಿದೆ ಎಂದು ಪಾಲಕಿಯನ್ನು ಆಳುಗಳು ಇಳಿಸಿ ಸುತ್ತಲು ಕೂತಿರಲು ಆ ತೋಟವನ್ನು ಕಾಯುವವನು ಬಂದು "ಸ್ವಾಮಿ ಈ ಕಟ್ಟೆಯ ಬುಡದಲ್ಲಿ ನಮ್ಮ ದೊರೆಯ ಸತ್ತ ಮಗನನ್ನು ಹೂಳಿಟ್ಟಿದ್ದೇವೆ. ನಿಮಗೂ ನಿಮ್ಮ ದೇವರಿಗೂ ಮೈಲಿಗೆಯಾಯಿತು" ಎಂದು ನುಡಿಯಲು ಎಲ್ಲರೂ ಗಾಬರಿಯಾದರು. ಶ್ರೀಗುರುಗಳು ನೋಡಿ ನಕ್ಕರು. ಎಲಾ ಮೂರ್ಖನೇ, ಆ ಹುಡುಗನು ಮೃತನಾಗಲಿಲ್ಲ. ಬೇಕಾದರೆ ತೆಗೆದು ನೋಡಿರಿ ಎಂದು ಹೇಳಿದರು. ಅವನು ತಮ್ಮ ದೊರೆಯನ್ನು ಕರೆದು

ಕೊಂಡು ಬಂದು ಅಗಿಯಲು ಪ್ರಾರಂಭಿಸಿದನು. ಶ್ರೀಗುರುಗಳು ಪಾಲಕಿಯಲ್ಲಿ ಕೂತು ಬರುವಾಗಲೇ ಅಪರೋಕ್ಷಜ್ಞಾನದಿಂದ ಇವರು ಎಲ್ಲಿ ಇಳಿಸುತ್ತಾರೆ ಎಂಬುವುದನ್ನು ಜ್ಞಾನದೃಷ್ಟಿಯಿಂದ ನೋಡಿ ಆ ಕಟ್ಟೆಯ ಕೆಳಗೆ ಹೂಳಿದ ಹುಡುಗನ ಮರಣದ ಕಾರಣವನ್ನು ತಿಳಿದುಕೊಂಡು ಗರುಡಮಂತ್ರವನ್ನು ಜಪಿಸಿ ಹಾವಿನ ವಿಷವನ್ನು ಪರಿಹಾರಮಾಡಿ ಅವನನ್ನು, ತಮ್ಮ ಪಾಲಕಿಯನ್ನು ದೇವರ ಪೆಟ್ಟಿಗೆಯನ್ನು ಇಡುವ ಮುನ್ನ ಬದುಕಿಸಿ ತಮ್ಮ ತಪಃಶಕ್ತಿಯಿಂದ ಅವನು ಒಳಗಿದ್ದರೂ ಶ್ವಾಸವಾಡುವಂತೆ ಮಾಡಿದ್ದರು. ಅವನು ಅಗಿದ ಕೂಡಲೇ ಮಲಗಿದವನಂತೆ ಎದ್ದುಕೂತನು. ತಂದೆಯು ಅತ್ಯಾನಂದಭರಿತ ನಾಗಿ ಕೃಷ್ಣಾಪುರ ಎಂಬ ಜಾಹಗೀರಿಯನ್ನು ಕೊಟ್ಟನು. ಎಲ್ಲರಿಗೂ ಆಶ್ಚರ್ಯ ವಾಯಿತು.

**ವಹ್ನಿಸ್ಥಮಾಲಿಕೋದ್ಧರ್ತಾ ವಹ್ನಿತಾಪಾತ್ಸದಾವತು ।**
**ಸಮಗ್ರಟೀಕಾವ್ಯಾಖ್ಯಾತಾ ಗುರುರ್ನೋ ವಿಷಯೋವತು ॥೩೧॥**

೩೧. ಅಗ್ನಿಯಲ್ಲಿ ಸುಟ್ಟುಹೋದ ರತ್ನದ ಮಾಲೆಯನ್ನು ತೆಗೆದು ಕೊಟ್ಟ ಶ್ರೀಗುರುಗಳು ಯಾವಾಗಲೂ ಬೆಂಕಿಯ ತಾಪದಿಂದ ರಕ್ಷಿಸಲಿ. ಇದರ ಇತಿಹಾಸವು ಹೀಗಿದೆ :—

ತಂಜಾವೂರು ಮಹಾರಾಜರು ತಮ್ಮ ದೇಶಕ್ಕೆ ಹನ್ನೆರಡು ವರ್ಷ ಮಳೆ ಇಲ್ಲವೆಂಬುದನ್ನು ಜ್ಯೋತಿಷ್ಕರಿಂದ ಕೇಳಿ ಭೀತರಾಗಿ ಕುಂಭಘೋಣದಲ್ಲಿ ಇರತಕ್ಕ ಶ್ರೀಗುರುಗಳಲ್ಲಿ ವಿಜ್ಞಾಪಿಸಲು ಶ್ರೀಗುರುಗಳು ತಂಜಾವೂರಿಗೆ ದಯ ಮಾಡಿಸಿ ಮಹಾರಾಜನ ಧಾನ್ಯದ ಮಂದಿರದಲ್ಲಿ ಧಾನ್ಯರಾಶಿಯಲ್ಲಿ ಶ್ರೀಕಾರ ವನ್ನು ಬರೆದು ನದಿಯಲ್ಲಿ ವರುಣಾಂತರ್ಯಾಮಿ ವಾಸುದೇವನನ್ನು ಧ್ಯಾನ ಮಾಡಿ ಹನ್ನೆರಡು ವರ್ಷಗಳವರೆಗೆ ಧಾನ್ಯ-ಜಲಗಳು ಅಕ್ಷಯವಾಗುವಂತೆ ಮಾಡಿ ಮಹಾರಾಜನ ಭೀತಿಯನ್ನು ಪರಿಹರಿಸಲು ಮಹಾರಾಜನು ಸಂತುಷ್ಟನಾಗಿ ಅಮೂಲ್ಯವಾದ ರತ್ನದಹಾರವನ್ನು ಮುಂದಿಟ್ಟು ಶ್ರೀಮೂಲರಾಮದೇವರಿಗೆ ಸಮರ್ಪಿಸಲು ವಿಜ್ಞಾಪಿಸಿದನು. ಶ್ರೀಗುರುಗಳು ಆತನ ಸಮಕ್ಷಮದಲ್ಲಿ ಆ ಹಾರವನ್ನು ಶ್ರೀದೇವರಿಗೆ ಸಮರ್ಪಿಸಿ ಮಂಗಳಾರತಿ ಆದಮೇಲೆ ಪೂಜಾ

ಸಮಾಪ್ತಿಯಾದ ಮೇಲೆ ಭಾದ್ರಪದ ಶುದ್ಧ ಏಕಾದಶೀ ದಿನದಲ್ಲಿ ಸುದರ್ಶನ ಹೋಮಕಾಲದಲ್ಲಿ ಮಹಾರಾಜನ ಎದುರಿಗೇ ಅಗ್ನಿಅಂತರ್ಗತಭಾರತೀರಮಣ ಮುಖ್ಯಪ್ರಾಣಾಂತರ್ಗತಹರಿಣೀಪತಿಶ್ರೀಪರಶುರಾಮಾಯ ಸ್ವಾಹಾ ಎಂದು ಅಗ್ನಿಯಲ್ಲಿ ಹಾಕಿಬಿಟ್ಟರು. ಮಹಾರಾಜನು ದುಃಖಿತನಾಗಿ ಜನರ ಸಮಕ್ಷಮ ದಲ್ಲಿ ತಮ್ಮನ್ನು ದೂಷಿಸಿದ್ದನ್ನು ತಿಳಿದು ಕಾರ್ತೀಕ ಶು॥ ಏಕಾದಶೀದಿನ ಪುನಃ ರಾಜನನ್ನು ಕರೆಸಿ ಆತನ ಸಮಕ್ಷಮದಲ್ಲಿ ಸುದರ್ಶನಹೋಮಕಾಲದಲ್ಲಿ ಆ ಹಾರ ವನ್ನು ಮೇಲೆ ತೆಗೆದು ರಾಜನಿಗೆ ಕೊಟ್ಟರು. ರಾಜನು ಬಹಳ ಪಶ್ಚಾತ್ತಪ್ತ ನಾಗಿ ಆ ಹಾರದ ಜೊತೆಗೆ ಮತ್ತೊಂದು ಹಾರವನ್ನು ಸಹ ಸಮರ್ಪಿಸಿದನು. ಇದರಿಂದ ಶ್ರೀಗುರುಗಳಿಗೆ ದೇವತೆಗಳ ಪ್ರಸಾದ ಯಾವಾಗಲೂ ಉಂಟು ಎಂಬು ವುದು ವಿದಿತವಾಗುತ್ತದೆ. "ಕಿಮಲಭ್ಯಂ ಭಗವತಿ" ಎಂಬ ಸೂಕ್ತಿಯಂತೆ ಶ್ರೀನರಸಿಂಹದೇವರು ಪ್ರೀತರಾದ ಮೇಲೆ ಎಲ್ಲರೂ ಪ್ರೀತರಾಗುವುದು ಆಶ್ಚರ್ಯವಲ್ಲ. ಎಲ್ಲಾ ಟೀಕೆಗಳಿಗೆ ವ್ಯಾಖ್ಯಾನಮಾಡಿದ ಶ್ರೀಗುರುಗಳು ವಿಷಯ ಸುಖದ ಕಾಲದಲ್ಲಿ (ಪಟ್ಟಣದಲ್ಲಿ) ಕಾಪಾಡಲಿ.

**ಕಾಂತಾರೇವತು ಮಾಂ ನಿತ್ಯಂ ಭಾಟ್ಟಸಂಗ್ರಹಕೃದ್ಗುರುಃ ।**
**ಸುಧಾಪರಿಮಳೋದ್ಧರ್ತಾ ಸ್ವಚ್ಛಂದಸ್ತು ಸದಾವತು ॥೩೨॥**

೩೨. ಭಾಟ್ಟಸಂಗ್ರಹವೆಂಬ ಗ್ರಂಥವನ್ನು ರಚಿಸಿದ ಶ್ರೀಗುರುಗಳು ನನ್ನನ್ನು ದಿನಾಲೂ ಅಡವಿಯಲ್ಲಿ ಕಾಪಾಡಲಿ. ಶ್ರೀಮನ್ನ್ಯಾಯಸುಧಾಗ್ರಂಥಕ್ಕೆ ಸರ್ವೋತ್ಕೃಷ್ಟವಾದ **ಪರಿಮಳ** ಎಂಬ ಗ್ರಂಥವನ್ನು ರಚಿಸಿದ, ಪರಮಾತ್ಮನ ಇಚ್ಛಾನುಸಾರವಾಗಿ ಕಾರ್ಯವನ್ನು ಮಾಡತಕ್ಕ ಶ್ರೀಗುರುಗಳು ಯಾವಾಗಲೂ ಕಾಪಾಡಲಿ.

**ರಾಜಚೋರವಿಷವ್ಯಾಧಿಯಾದೋವನ್ಯಮೃಗಾದಿಭಿಃ ।**
**ಅಪಸ್ಮಾರಾಪಹರ್ತಾ ನಃ ಶಾಸ್ತ್ರವಿತ್ ಸರ್ವದಾವತು ॥೩೩॥**

೩೩. ಅಪಸ್ಮಾರರೋಗವನ್ನು ಪರಿಹಾರ ಮಾಡತಕ್ಕ ಶಾಸ್ತ್ರವನ್ನು ತಿಳಿದಿರತಕ್ಕ ಶ್ರೀಗುರುಗಳು, ರಾಜರು, ಕಳ್ಳರು, ವಿಷಭಕ್ಷಣ, ಬೇನೆಗಳು,

ನೀರಿನಲ್ಲಿರತಕ್ಕ ಪ್ರಾಣಿಗಳು, ವನದಲ್ಲಿರತಕ್ಕ ಪ್ರಾಣಿಗಳು (ಮೃಗಗಳು) ಇವುಗಳ ಬಾಧೆಯಿಂದ ಯಾವಾಗಲೂ ನಮ್ಮನ್ನು ಕಾಪಾಡಲಿ.

**ಗತೌ ಸರ್ವತ್ರ ಮಾಂ ಪಾತೂಪನಿಷತ್ †ಖಂಡಕೃದ್ಗುರುಃ ।**
**ಋಗ್ವ್ಯಾಖ್ಯಾನಕೃದಾಚಾರ್ಯಃ ಸ್ಥಿತೌ ರಕ್ಷತು ಮಾಂ ಸದಾ ॥೩೪॥**

೩೪. ದಶೋಪನಿಷತ್‌ಖಂಡಾರ್ಥಗಳನ್ನು ರಚಿಸಿದ ಶ್ರೀಗುರುಗಳು ಎಲ್ಲಾ ಕಡೆಯಲ್ಲಿಯೂ ನಾನು ನಡೆಯುವಾಗ ನನ್ನನ್ನು ರಕ್ಷಿಸಲಿ. ಋಗ್ವ್ಯಾಖ್ಯಾನವನ್ನು ಮಾಡಿದ ಶ್ರೀಗುರುಗಳು ನಾನು ಇದ್ದಲ್ಲಿ ಯಾವಾಗಲೂ ನನ್ನನ್ನು ರಕ್ಷಿಸಲಿ.

**ಮಂತ್ರಾಲಯನಿವಾಸೀ ಮಾಂ ಜಾಗ್ರತ್ ಕಾಲೇ ಸದಾವತು ।**
**ನ್ಯಾಯಮುಕ್ತಾವಲೀಕರ್ತಾ ಸ್ವಪ್ನೇ ರಕ್ಷತು ಮಾಂ ಸದಾ ॥೩೫॥**

೩೫. ಮಂತ್ರಾಲಯದಲ್ಲಿ ವಾಸಮಾಡಿದ ಶ್ರೀಗುರುಗಳು ಜಾಗ್ರದವಸ್ಥಾ (ಎದ್ದಿರುವಾಗ) ಕಾಲದಲ್ಲಿ ಯಾವಾಗಲೂ ನನ್ನನ್ನು ಕಾಪಾಡಲಿ. ನ್ಯಾಯಮುಕ್ತಾವಳೀ ಎಂಬ ಉತ್ತಮವಾದ ಗ್ರಂಥವನ್ನು ಮಾಡಿದ ಶ್ರೀಗುರುಗಳು ನನ್ನನ್ನು ಯಾವಾಗಲೂ ಸ್ವಪ್ನಾವಸ್ಥೆಯಲ್ಲಿ ರಕ್ಷಿಸಲಿ.

**ಮಾಂ ಪಾತು ಚಂದ್ರಿಕಾವ್ಯಾಖ್ಯಾಕರ್ತಾ ಸುಪ್ತೌ ಹಿ ತತ್ವಕೃತ್ ।**
**ಸುತಂತ್ರದೀಪಿಕಾಕರ್ತಾ ಮುಕ್ತೌ ರಕ್ಷತು ಮಾಂ ಗುರುಃ ॥೩೬॥**

೩೬. ಚಂದ್ರಿಕಾಗ್ರಂಥದ ವ್ಯಾಖ್ಯಾನಮಾಡಿದ ಶ್ರೀಗುರುಗಳು ನಿದ್ರಾವಸ್ಥೆಯಲ್ಲಿ ನನ್ನನ್ನು ಕಾಪಾಡಲಿ. ತತ್ವಬೋಧಕಗ್ರಂಥಗಳನ್ನು ಮಾಡಿದ ಮತ್ತು ಉತ್ತಮವಾದ ಬ್ರಹ್ಮಸೂತ್ರಗಳ ವ್ಯಾಖ್ಯಾನರೂಪವಾದ ತಂತ್ರದೀಪಿಕೆಯನ್ನು ರಚಿಸಿದ ಶ್ರೀಗುರುಗಳು ಮುಕ್ತಿಯಲ್ಲಿ ಕಾಪಾಡಲಿ.

---

ಪಾಠಾಂತರ—†ಖಂಡಾರ್ಥಕೃದ್ಗುರುಃ

**ಗೀತಾರ್ಥಸಂಗ್ರಹಕರ್ತಾ ಸದಾ ರಕ್ಷತು ಮಾಂ ಗುರುಃ।**
**ಶ್ರೀಮಧ್ವಮತದುಗ್ಧಾಬ್ಧಿಚಂದ್ರೋಽವತು ಸದಾನಘಃ ॥೩೭॥**

೩೭. ಗೀತಾರ್ಥಸಂಗ್ರಹವೆಂಬ ಗ್ರಂಥವನ್ನು ಮಾಡಿದ ಶ್ರೀಗುರುಗಳು ನನ್ನನ್ನು ಯಾವಾಗಲೂ ರಕ್ಷಿಸಲಿ. ಶ್ರೀಮಧ್ವಾಚಾರ್ಯರ ಮತವೆಂಬೋ ಕ್ಷೀರ ಸಮುದ್ರಕ್ಕೆ ಚಂದ್ರನಂತೆ ಇರತಕ್ಕ ಪಾಪರಹಿತರಾದ ಶ್ರೀಗುರುಗಳು ಯಾವಾಗಲೂ ಕಾಪಾಡಲಿ.

**ಇತಿ ಶ್ರೀರಾಘವೇಂದ್ರಸ್ಯ ಕವಚಂ ಪಾಪನಾಶನಮ್ ।**
**ಸರ್ವವ್ಯಾಧಿಹರಂ ಸದ್ಯಃ ಪಾವನಂ ಪುಣ್ಯವರ್ಧನಮ್ ॥೩೮॥**

**ಯ ಇದಂ ಪಠತೇ ನಿತ್ಯಂ ನಿಯಮೇನ ಸಮಾಹಿತಃ ।**
**ಅದೃಷ್ಟಿಃ ಪೂರ್ಣದೃಷ್ಟಿಃ ಸ್ಯಾದೇಡಮೂಕೋಽಪಿವಾಕ್ಪತಿಃ ।**
**ಪೂರ್ಣಾಯುಃ ಪೂರ್ಣಸಂಪತ್ತಿ ಭಕ್ತಿಜ್ಞಾನಾದಿವೃದ್ಧಿಮಾನ್ ॥೩೯॥**

೩೮-೩೯. ಈ ರೀತಿಯಾದ (ಶ್ರೀರಾಘವೇಂದ್ರಕವಚವನ್ನು) ಪಾಪವನ್ನು ಪರಿಹಾರಮಾಡತಕ್ಕ, ಎಲ್ಲಾ ಬೇನೆಗಳನ್ನು ಪರಿಹಾರಮಾಡತಕ್ಕ, ತತ್ಕಾಲದಲ್ಲಿ ಪವಿತ್ರನನ್ನು ಮಾಡತಕ್ಕ, ಪುಣ್ಯವನ್ನು ಬೆಳೆಸತಕ್ಕ, ಇದನ್ನು ಯಾವ ಮನುಷ್ಯನು ನಿಯಮದಿಂದ ಏಕಚಿತ್ತನಾಗಿ ಪಠಿಸುತ್ತಾನೋ ಅವನಿಗೆ ಕಣ್ಣು ಕಾಣದೇ ಇದ್ದರೆ ಕಾಣುತ್ತದೆ. ಹುಟ್ಟಿದಾರಭ್ಯ ಮೂಕನಾಗಿದ್ದರೂ ಬೃಹಸ್ಪತ್ಯಾಚಾರ್ಯರಂತೆ ಯೋಗ್ಯತಾನುಸಾರ ಮಾತನಾಡಲು ಸಮರ್ಥನಾಗುತ್ತಾನೆ. ಸಂಪೂರ್ಣವಾದ ಆಯುಷ್ಯ, ಸಂಪೂರ್ಣಸಂಪತ್ತು, ಭಕ್ತಿ-ಜ್ಞಾನ-ವೈರಾಗ್ಯಗಳ ವೃದ್ಧಿಯನ್ನು ಸಹ ಹೊಂದುತ್ತಾನೆ.

**ಪೀತ್ವಾ ವಾರಿ ನರೋ ನೇನ ಕವಚೇನಾಭಿಮಂತ್ರಿತಮ್ ।**
**ಜಹಾತಿ ಕುಕ್ಷಿಗಾನ್ ರೋಗಾನ್ ಗುರುವರ್ಯಪ್ರಸಾದತಃ ॥೪೦॥**

೪೦. ಈ ಕವಚದಿಂದ ಮಂತ್ರಿಸಿದ ನೀರನ್ನು ಕುಡಿದರೆ ಶ್ರೀಶ್ರೀಗುರುರಾಜರ ಅನುಗ್ರಹದಿಂದ ಹೊಟ್ಟೆಯಲ್ಲಿರತಕ್ಕ ರೋಗಗಳೆಲ್ಲಾ ನಾಶವಾಗುತ್ತವೆ.

ಪ್ರದಕ್ಷಿಣನಮಸ್ಕಾರಾನ್ ಗುರೋರ್ವೃಂದಾವನಸ್ಯ ಯಃ ।
ಕರೋತಿ ಪರಯಾ ಭಕ್ತ್ಯಾ ತದೇತತ್ ಕವಚಂ ಪಠನ್ ।
ಪಂಗುಃ ಕುಣಿಶ್ಚ ಪೌಗಂಡಃ
ಪೂರ್ಣಾಂಗೋ ಜಾಯತೇ ಧ್ರುವಂ ॥೪೧॥

೪೧. ಯಾವನು ಶ್ರೀಶ್ರೀಗುರುಗಳ ವೃಂದಾವನಕ್ಕೆ ಪ್ರದಕ್ಷಿಣ ನಮಸ್ಕಾರಗಳನ್ನು ಉತ್ತಮವಾದ ಭಕ್ತಿಯಿಂದ ಈ ಕವಚವನ್ನು ಪಠಿಸುತ್ತ ಮಾಡಿದರೆ ಹುಟ್ಟಾರಭ್ಯ ಕಾಲಿಲ್ಲದವನು, ಮಧ್ಯದಲ್ಲಿ ಕಾಲುಹೋದವನು, ಒಂದೇ ಕಾಲಿನಿಂದ ನಡೆಯತಕ್ಕವನು ಸಹ ಪೂರ್ಣವಾದ ಅಂಗವುಳ್ಳವನಾಗುತ್ತಾನೆ. ನಿಶ್ಚಯ. ಇದರಲ್ಲಿ ಉತ್ತಮವಾದ ಭಕ್ತಿಯೆಂದರೆ ಶ್ರೀಗುರುಗಳ ಸದ್ಗುಣಗಳ ಜ್ಞಾನವನ್ನು ಮಾಡಿಕೊಂಡು, ತನ್ನ ದೇಹ, ತನ್ನ ಬಂಧುಗಳು ಈ ಎಲ್ಲ ವಸ್ತುಗಳಿಗಿಂತಲೂ ಸಾವಿರಪಟ್ಟು ಹೆಚ್ಚಾದ ಸಾವಿರಾರು ವಿಘ್ನಗಳು ಬಂದರೂ ಬಿಡದೇ ಇರತಕ್ಕ ಅವಿಚ್ಛಿನ್ನಪ್ರೇಮಪ್ರವಾಹವು ಶ್ರೀಮನ್ನ್ಯಾಯ-ಸುಧಾದಲ್ಲಿ ಹೇಳಿದೆ.

ಶ್ವೇತಾಶ್ಚ ಕುಷ್ಠಪೂರ್ವಾಶ್ಚ ನಶ್ಯಂತ್ಯಾಮಯರಾಶಯಃ ॥೪೨॥

೪೨. ಉಳಿದ ಶ್ವೇತಕುಷ್ಠವೇ ಮೊದಲಾಗಿ ಉಳ್ಳ ಎಲ್ಲಾ ರೋಗಗಳು ನಾಶಹೊಂದುತ್ತವೆ.

ಅಷ್ಟಾಕ್ಷರೇಣ ಮಂತ್ರೇಣ ಸ್ತೋತ್ರೇಣ ಕವಚೇನ ಚ ।
ವೃಂದಾವನೇ ಸನ್ನಿಹಿತಮಭಿಷಿಚ್ಯ ಯಥಾವಿಧಿ ॥೪೩॥

ಯಂತ್ರೇ ಮಂತ್ರಾಕ್ಷರಾಣ್ಯಷ್ಟೌ ವಿಲಿಖ್ಯಾತ್ರ ಪ್ರತಿಷ್ಠಿತಂ ।
ಷೋಡಶೈರುಪಚಾರೈಶ್ಚ ಸಂಪೂಜ್ಯ ತ್ರಿಜಗದ್ಗುರುಂ ॥೪೪॥

ಅಷ್ಟೋತ್ತರಶತಾಖ್ಯಾಭಿರರ್ಚಯೇತ್ ಕುಸುಮಾದಿಭಿಃ ।
ಫಲೈಶ್ಚ ವಿವಿಧೈರೇವಂ ಗುರೋರರ್ಚಾಂ ಪ್ರಕುರ್ವತಃ ॥೪೫॥

**ನಾಮಶ್ರವಣಮಾತ್ರೇಣ ಗುರುವರ್ಯಪ್ರಸಾದತಃ ।**
**ಭೂತಪ್ರೇತಪಿಶಾಚಾದ್ಯಾಃ ವಿದ್ರವಂತಿ ದಿಶೋ ದಶ ॥೪೬॥**

೪೩-೪೬. ಶ್ರೀಗುರುಗಳ ಸ್ತೋತ್ರ, ಈ ಕವಚ ಮತ್ತು ಅಷ್ಟಾಕ್ಷರ ಮಂತ್ರ ('ಶ್ರೀ ರಾ ಘ ವೇಂ ದ್ರಾ ಯ ನ ಮಃ' ಇದನ್ನು) ವನ್ನು ಪಠಿಸುತ್ತ ವಿಧಿಪೂರ್ವಕವಾಗಿ ವೃಂದಾವನದಲ್ಲಿ ಸನ್ನಿಹಿತರಾದ ಶ್ರೀಗುರುಗಳಿಗೆ ಅಭಿಷೇಕ ಮಾಡಿ ತಾಮ್ರ ಅಥವಾ ಪಂಚಲೋಹದ ತಗಡಿನಲ್ಲಿ ಶ್ರೀಗುರುಗಳ ಯಂತ್ರದಲ್ಲಿ ಹಿಂದೆ ಹೇಳಿದ ಮಂತ್ರವನ್ನು ವಿಧಿಪೂರ್ವಕವಾಗಿ ಬರೆದು ಆ ಯಂತ್ರವನ್ನು ವೃಂದಾವನದ ಮೇಲೆ ಇಟ್ಟು ಧ್ಯಾನಾವಾಹನಾದಿ ಷೋಡಶೋಪಚಾರಗಳಿಂದ ಶ್ರೀಗುರುಗಳನ್ನು ಪೂಜಿಸಿ ನೂರಾ ಎಂಟು ನಾಮಗಳಿಂದ ಹೂವುಗಳೇ ಮೊದಲಾದವುಗಳಿಂದ ನಾನಾ ವಿಧ ಫಲಗಳಿಂದ ಶ್ರೀಗುರುಗಳ ಪೂಜೆಯನ್ನು ಮಾಡಿದವನ ಹೆಸರನ್ನು ಕೇಳಿದರೆ ಶ್ರೀಗುರುಗಳನುಗ್ರಹದಿಂದ ಭೂತಪ್ರೇತಪಿಶಾಚ, ಬ್ರಹ್ಮರಾಕ್ಷಸಗಳು ಹತ್ತು ದಿಕ್ಕುಗಳಿಗೆ ಓಡಿಹೋಗುತ್ತವೆ.

**ಪಠೇದೇತತ್ ತ್ರಿಕಂ ನಿತ್ಯಂ ಗುರೋರ್ವೃಂದಾವನಾಂತಿಕೇ ।**
**ದೀಪಂ ಸಂಯೋಜ್ಯ ವಿದ್ಯಾವಾನ್ ಸಭಾಸು ವಿಜಯೀಭವೇತ್ ॥೪೭॥**

೪೭. ಶ್ರೀಗುರುಸ್ತೋತ್ರ, ಕವಚ, ಅಷ್ಟಾಕ್ಷರಮಂತ್ರ ಈ ಮೂರನ್ನು ದಿನಾಲೂ ಶ್ರೀಗುರುಗಳ ವೃಂದಾವನಸಮೀಪದಲ್ಲಿ ದೀಪವನ್ನು ಹಚ್ಚಿ ಪಠಿಸಿದರೆ ಬ್ರಹ್ಮವಿದ್ಯಾ ಬರುತ್ತದೆ. ಸಭೆಗಳಲ್ಲಿ ವಿಜಯವುಳ್ಳವನೂ ಆಗುತ್ತಾನೆ.

**ರಾಜಚೋರಮಹಾವ್ಯಾಘ್ರಸರ್ಪನಕ್ರಾದಿ ಪೀಡನಂ ।**
**ಕವಚಸ್ಯ ಪ್ರಭಾವೇಣ ಜಾಪಕಸ್ಯ ನ ಜಾಯತೇ ॥೪೮॥**

೪೮. ಈ ಕವಚವನ್ನು ಜಪಮಾಡತಕ್ಕವನಿಗೆ ಇದರ ಮಹಿಮೆಯಿಂದ ರಾಜರು, ಕಳ್ಳರು, ದೊಡ್ಡ ಹುಲಿಗಳು, ಹಾವುಗಳು, ಮೊಸಳೆಗಳು, ಇವುಗಳೇ ಮೊದಲಾದ ದುಷ್ಟಪ್ರಾಣಿಗಳ ಭಯವು (ಪೀಡೆಯು) ಆಗುವುದಿಲ್ಲ.

**ಸೋಮಸೂರ್ಯೋಽಪರಾಗಾದಿಕಾಲೇ ವೃಂದಾವನಾಂತಿಕೇ ।**
**ಕವಚಾದಿತ್ರಿಕಂ ಪುಣ್ಯಂ ಅಪ್ಪಣಾಚಾರ್ಯದರ್ಶಿತಂ ॥೪೯॥**

**ಜಪೇದ್ಯಃ ಸ ಧನಂ ಪುತ್ರಾನ್ ಭಾರ್ಯಾಂ ಚ ಸುಮನೋರಮಾಮ್ ।**
**ಜ್ಞಾನಂ ಭಕ್ತಿಂ ಚ ವೈರಾಗ್ಯಂ ಭುಕ್ತಿಂ ಮುಕ್ತಿಂ ಚ ಶಾಶ್ವತೀಂ ।**
**ಸಂಪ್ರಾಪ್ಯ ಮೋದತೇ ನಿತ್ಯಂ ಗುರುವರ್ಯಪ್ರಸಾದತಃ ॥೫೦॥**

೪೯-೫೦. ಯಾವ ಮನುಷ್ಯನು ಚಂದ್ರ-ಸೂರ್ಯ ಗ್ರಹಣಗಳಲ್ಲಿ ಪುಷ್ಯಾರ್ಕ-ಗುರುಪುಷ್ಯ (ಭಾನುವಾರವಾಗಲಿ ಗುರುವಾರವಾಗಲಿ ಪುಷ್ಯನಕ್ಷತ್ರ ಬಂದರೆ) ಯೋಗಗಳಲ್ಲಿ ಶ್ರೀವೃಂದಾವನದ ಹತ್ತಿರ ಶ್ರೀಕವಚವೇ ಮೊದ ಲಾದ ಹಿಂದೆ ಹೇಳಿದ ಪುಣ್ಯಕರವಾದ ಅಪ್ಪಣಾಚಾರ್ಯರಿಂದ ತೋರಿಸಲ್ಪಟ್ಟ ಮೂರನ್ನು ಜಪಿಸುತ್ತಾನೋ ಅವನು ದ್ರವ್ಯವನ್ನು, ಮಕ್ಕಳನ್ನು, ಸುಂದರಿಯಾದ ಹೆಂಡತಿಯನ್ನು, ಜ್ಞಾನ, ಭಕ್ತಿ, ವೈರಾಗ್ಯಗಳನ್ನು ಭುಕ್ತಿಯನ್ನು, ಶಾಶ್ವತವಾದ ಮುಕ್ತಿಯನ್ನು ಹೊಂದಿ ನಿತ್ಯದಲ್ಲಿ ಶ್ರೀಗುರುಗಳ ಅನುಗ್ರಹದಿಂದ ಸಂತೋಷ ಪಡುತ್ತಾನೆ.

**ಇತಿ ಶ್ರೀಮದಪ್ಪಣಾಚಾರ್ಯಕೃತ ಶ್ರೀರಾಘವೇಂದ್ರಕವಚಂ ಸಂಪೂರ್ಣಂ.**

ಈ ರೀತಿಯಾಗಿ ಶ್ರೀಮದಪ್ಪಣಾಚಾರ್ಯರಿಂದ ಮಾಡಲ್ಪಟ್ಟ ಶ್ರೀರಾಘ-ವೇಂದ್ರ ಕವಚವು ಸಂಪೂರ್ಣವಾಯಿತು.

**॥ ಶ್ರೀಕೃಷ್ಣಾರ್ಪಣಮಸ್ತು ॥**